Regd No B'G. 155

Sri

21—9—1964

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು= ಅಂಮನೆ ಸಿರಸ್ತೆದಾರ್ ಎಂ ವಿ. ಸುಬ್ಬರಾಯರು | 2 ನಯೆ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಯೆ

Protect the Cow
ಗೋಸಂರಕ್ಷಣೆ ಮಾಡಿ

2000 ಆಹಾರ ಧಾನ್ಯ ತಕ್ಷೀರು ದಾರರಿಗೆ ಶಿಕ್ಷೆ

ಮುನಿಸಿಪಲ್ ಫೈನ್ ಸೋಟು

ಮೈಸೂರು 16— ಮುನಿಸಿಪಲ್ ಕಮಿಷನರವರು ಸೆಕ್ಷನ್ ಅಫೀಸರ್ ಜೊತೆಯಲ್ಲಿ ಲಷ್ಕರು ಮೊಹಲ್ಲಾದ ಗಾಂಧಿ ನಗರದ ಕೆಲ ಭಾಗಗಳಲ್ಲಿ ಮತ್ತು ಗಾಂಧಿ ಸ್ಕ್ವೇರಿನಲ್ಲಿ ಇನ್‌ಸ್ಪೆಕ್ಷನ್ ನಡೆಸಿ, ಬಹಿರಂಗವಾಗಿದ್ದ ಮೂರು ಹೋಟಲುಗಳ ಲೈಸೆನ್ಸನ್ನು ಸಸ್ಪೆಂಡು ಮಾಡಿದರು, ಮತ್ತು ಲೈಸೆನ್ಸು ಇಲ್ಲದೆ ಮನೆ ಕಟ್ಟಿದ ನಾಲ್ಕು ಜನರನ್ನು ಪಾಸಿಕ್ಯೂಟ್ ಮಾಡಲು ಆರ್ಡರ್ ಮಾಡಲಾಯಿತು.

★

ಬಾಕ್ಸಿಂಗ್‌ಗೆ ಅಹುತಿ

ಜೋಹನ್ಸಬರ್ಗ್— ಬಾಕ್ಸಿಂಗಿನಲ್ಲಿ ಚಾಂಪಿಯನ್ 22 ವರ್ಷದ ನಿಕಿ ಇರಾಪ್ಟಸ್ ಕಳೆದ ವಾರ ಮಾಡಿದ ಬಾಕ್ಸಿಂಗ್‌ನಲ್ಲಿ ಮೆದಳಿಗೆ ಏಟು ಬಿದ್ದು ಪ್ರಜ್ಞೆ ತಪ್ಪಿ ಆಸ್ಪತ್ರೆಗೆ ಒಯ್ಯಲ್ಪಟ್ಟು ಅಲ್ಲಿ ಮೃತನಾದನು

❋

ಮೈಸೂರಿನ ಶಿಕ್ಷಣ ವೆಚ್ಚ

ಬೆಂಗಳೂರು— ಶಿಕ್ಷಣಕ್ಕಾಗಿ ವೆಚ್ಚ ಮಾಡುವುದರಲ್ಲಿ ಮೈಸೂರು ಭಾರತದಲ್ಲಿ ಮೂರನೇ ಸ್ಥಾನ ಪಡೆದಿದೆ

★

ವಿನೋದ

ತಾಯಿ— ಮಗು, ಇವಳು ನಿನ್ನ ಹೊಸಬೋಧಿಕೆ ; ಇವಳಿಗೆ ಒಂದು ಮುತ್ತು ಕೊಡು.

ಮಗು, ಬೇಡಮ್ಮ, ಬೇಡ.

ತಾಯಿ— ಯಾಕೋ ?

ಮಗು— ಬೆಳಿಗ್ಗೆ ಇವಳಿಗೆ ಅಪ್ಪ ಮುತ್ತುಕೊಟ್ಟಾಗ, ಇವಳು ಅಪ್ಪನ ಕೆನ್ನೆಗೆ ಹೊಡೆದಳು.

ಸಾಳೆಯ ಪಂಚಾಂಗ

ದೈವಜ್ಞ ತಿಲಕಮಣಿ
ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರಿಂದ
22 ಮಂಗಳವಾರ ವಾಡ್ಯ ಉತ್ತರಾಭಾದ್ರ

ಲೂಟಿ

ಕೊಯಮತ್ತೂರು— ಪಿಲ್ಲೂರು ಅಣೆಕಟ್ಟಿನ ನಿರ್ಮಾಣ ಕಾರ್ಯದ ಕಾರ್ಮಿಕರು 200 ಮಂದಿ, ಇ ಭಾಗದಲ್ಲಿನ ಅಂಗಡಿಗಳಲ್ಲಿ ಐದನ್ನು ಮತ್ತು ಒಂದು ಹೋಟಲನ್ನೂ ಲೂಟಿ ಮಾಡಿ 3 ಸಾವಿರ ರೂಗಳ ಮೌಲ್ಯದ ಆಹಾರ ಧಾನ್ಯ ಮತ್ತು ತಿಂಡಿಯನ್ನು ಲೂಟಿ ಮಾಡಿದರು ; 6 ಮಂದಿ ಬಂಧಿಸಲ್ಪಟ್ಟಿದ್ದಾರೆ

ವಿದ್ಯುಚ್ಚಕ್ತಿಯಿಂದ ಶವಸಂಸ್ಕಾರ

ಬೆಂಗಳೂರು— ಕೆಂಪಾಂಬುಧೀ ಸ್ಮಶಾನದಲ್ಲಿ ವಿದ್ಯುಚ್ಚಕ್ತಿಯಿಂದ ಶವಸಂಸ್ಕಾರ ವಿಧಾನ ಮಾಡಲಾಗುವುದೆಂದು ತಿಳಿಯಬಂದಿದೆ.

ದತ್ತು ಮಾಡಿಕೊಂಡರು

ಕಳೆದ ಮೂರು ವರ್ಷಗಳಿಂದ 2000 ಕ್ಕೂ ಹೆಚ್ಚು ವಿದೇಶೀ ಮಕ್ಕಳನ್ನು ಪಾಶ್ಚಾತ್ಯ ದೇಶಗಳ ಸಂಸಾರಗಳು ದತ್ತು ಮಾಡಿಕೊಂಡಿವೆ.

ಶಾಂತಿಯುತ ಸಹಬಾಳ್ವೆ

ನವದೆಹಲಿ— ಭಾರತ ಮತ್ತು ರಷ್ಯ ಶಾಂತಿಯುತ ಸಹಬಾಳ್ವೆ ತತ್ವದಲ್ಲಿ ಅಚಲ ನಂಬಿಕೆ ಹೊಂದಿವೆ, ಎಂದು ಭಾರತ ರಾಷ್ಟ್ರಾಧ್ಯಕ್ಷರು ರಷ್ಯಾ ಭೇಟಿ ನಂತರ ಹೊಂಡಿಸಿದ ಹೇಳಿಕೆಯಲ್ಲಿ ತಿಳಿಸಿದರು.

ಮಾಧ್ವ ಮಹಾಮಂಡಲಿ

ಮೈಸೂರು — ಅಖಿಲ ಭಾರತ ಮಾಧ್ವ ಮಹಾಮಂಡಲದ ಜನರಲ್ ಬಾಡಿ ಮೀಟಿಂಗು ತಾ|| 13 ರಂದು ನಡೆದ, ಈ ಸಾಲಿನ ಕಾರ್ಯಕಾರಿ ಸಮಿತಿ ಸದಸ್ಯರು ಚುನಾಯಿಸಲ್ಪಟ್ಟರು.

★

ನೂರಾರು ಕಸ್ಟಮರ್‌ಗಳ ಹೋಟಲನ್ನು ಮಂತ್ರಿ ಶ್ರೀ ಕೆ ಪುಟ್ಟ ಸ್ವಾಮಿಯವರು ಮೊನ್ನೆ ಉದ್ಘಾಟನೆ ಮಾಡಿದರು

ಸಂಪತ್ತು ತೆರಿಗೆ ಇಲ್ಲ

ಬೊಂಬಾಯಿ— ಬೆಲ್ಜಿಯಂನಲ್ಲಿ ಸಂಪತ್ತು ತೆರಿಗೆ ಇಲ್ಲವೆಂದು ಭಾರತ ರೈಲ್ವೆ ಮಂತ್ರಿ ಶ್ರೀ ಎಸ್ ಕೆ ಪಾಟೀಲರು ಹೇಳಿದರು

★

ರಾಷ್ಟ್ರಾಧ್ಯಕ್ಷರು

ಲಂಡನ್— ಅಸ್ವಾಧಿಂದ ಇಲ್ಲಿಗೆ ಆಗಮಿಸಿದ ಭಾರತ ರಾಷ್ಟ್ರಾಧ್ಯಕ್ಷರು ಇಂದು ಏರ್ಲಿಂಡಿಗೆ ತೆಳುವರು.

❋

ಮೈಸೂರು ಬಂದ್

ಮೈಸೂರು— ಸೆಪ್ಟಂಬರ್ 25 ರಂದು ಮೈಸೂರು ಬಂದ್ ಯಶಸ್ವಿಗೊಳಿಸಬೇಕೆಂದು ಎಸ್ಸೆಸ್ಪಿ ನಾಯಕರು ಶ್ರೀ ಶಿವಪ್ಪ ಮತ್ತು ಶ್ರೀ ಗೋಪಾಲಗೌಡರು ಪೊನ್ನೆ ಮಾಡಿದ ಭಾಷಣದಲ್ಲಿ ತಿಳಿಸಿದರು.

★

ಸತ್ಯಾಗ್ರಹ

ಮಂಗಳೂರು— ಬೆಲೆಏರಿಕೆ ವಿರುದ್ಧ ಸತ್ಯಾಗ್ರಹ ನಡೆಯುತ್ತಲೇ ಇದೆ : ಇಲ್ಲಿವರೆಗೆ ಒಟ್ಟು 1600 ಮಂದಿ ಪುರುಷರಿಂದಾಗಿದ್ದಾರೆ : ಅಕ್ಕಿಯು ಕಡಮೆ ಬೆಲೆಗೆ ದೊರೆಯುವವರೆಗೂ ಸತ್ಯಾಗ್ರಹ ನಡೆಯುತ್ತಿರುವುದಾಗಿ ತಿಳಿಸಿರುವರು.

❋

ಅಕ್ಕಿ ವಶ

ಬೆಂಗಳೂರು— ಹನುಮಂತಪುರದಲ್ಲಿ ಒಂದು ಅಂಗಡಿಯಲ್ಲಿ ಪೋಲೀಸರು 47 ಮೂಟೆ ಅಕ್ಕಿಯನ್ನು ವಶಪಡಿಸಿಕೊಂಡು ಅಂಗಡಿಯವನನ್ನು ಬಂಧಿಸಿದರು.

ಲಾಭಬಡಕರಿಗೆ ಶಿಕ್ಷೆ

ನವದೆಹಲಿ— ಆಹಾರ ಧಾನ್ಯ ವ್ಯಾಪಾರದಲ್ಲಿ ಹೆಚ್ಚು ದಾಸ್ತಾನು ಮತ್ತು ಲಾಭಬಡಕತನ ನಡೆಸಿದ 2000 ಮಂದಿಗೆ ಶಿಕ್ಷೆ ವಿಧಿಸಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು — ಸಧ್ಯದಲ್ಲಿ ದೇಶದಲ್ಲಿ 120 ಎಲಿಥು ಜನರಿಗೆ 80000 ಫೇರ್ ಪ್ರೈಜು ಅಂಗಡಿಗಳಿವೆಯೆಂದೂ ತಿಳಿಸಲಾಯಿತು

★

ಚಾಮರಾಜನಗರ— ಕಂಟ್ರೋಲು ದಂಕ್ಕೆ ಅಕ್ಕಿ ಮಾಡಿದ್ದ ಇಬ್ಬರು ವರ್ತಕರನ್ನು ವಶ ಬಿಲೆ ಪಟ್ಟಿ ಪ್ರದರ್ಶಿಸದಿದ್ದ ವ್ಯಕ್ತಿಯೊಬ್ಬನೆ ವೇಲೂ ಮೊಖದ್ದಮೆ ಹಾಕಲಾಗಿದೆ.

ಬೆಂಗಳೂರು ಪಾಂಸಭೆಯು ಮುಂದಿರುವ ಬ್ರಿಟಿಷರ ರಣಸ್ತಂಭ ಒಡಿಯಲು ಹಾರೆ ಹಿಡಿದು ನಗ್ನಿದ ಕನ್ನಡ ಜಲು ಪಳಿ ಪ್ರದರ್ಶನಕಾರರ ಮೇಲೆ ನಿನ್ನೆ ಸಂಜೆ ಪೋಲೀಸರು ಲಾಠಿಪ್ರಹಾರ ನಡೆಸಿದರು

ಗುಂಪುಗುಳಿತನ ಮತ್ತು ಪಿತೂರಿಗಳಲ್ಲಿ ತೊಡಗುವುದಕ್ಕೆ ಬದಲು ತಾವು ಅಧಿಕಾರ ತ್ಯಜಿಸಲು ಸಿದ್ಧವಾಗಿರುವುದಾಗಿ ಪ್ರಧಾನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ ಕಲ್ಕತ್ತಾದಲ್ಲಿ ತಿಳಿಸಿದರು

ಮುಂದಿನ ತಿಂಗಳು 1 ನೆಯು ತಾ|| ನಿಂದ ಹೊಸ 3 ಪೈಸೆ ನಾಣ್ಯ ಚಲಾವಣೆಗೆ ಬರುವದು

ಜನಮತ ಪ್ರಕಾರ ಕಾಶ್ಮೀರ ಪ್ರಶ್ನೆ ಪರಿಹಾರವಾಗಬೇಕೆಂದು ಇತ್ಯರ್ಥವಾಗಲೆಂದು ಅಧ್ಯಕ್ಷ ಸುಕಾರ್ನೋ ತಿಳಿಸಿದರು

ವರ್ಣಾಶ್ರಮಧರ್ಮ

(ಮುಂದುವರಿದುದು)

ಬೇರೆ ಜಾತಿಯವರು ತಮಗೆ ಅನ್ಯಾಯ ಸಹಿಷ್ಣುತೆ ಮತ್ತು ಇದೆಯೆಂದು ಎಷ್ಟು ಕೂಗಿಕೊಂಡರೂ, ಹಿಂದುವಿನ ಮಟ್ಟಲು ಸಾಧ್ಯವಿಲ್ಲ : ಈ ವಿಚಾರಕ್ಕೆ ಕರ್ಪಣದ ಒಂದು ವೃತ್ತಾಂತವನ್ನು ಉದಾಹರಿಸಬಹುದು.

' ಕೋಟ್ಯಾಂತರ ಜನಾಂಗವಾಗಿ ಹರಡಿರುವ ಕೋಟ್ಯಾಂತರ ಜನರೂ, ಭೂಲೋಕದ ಸಪ್ತದ್ವೀಪದಲ್ಲಿ ವಾಸಿಸುವವರೂ, ಮೂರು ಲೋಕದಲ್ಲಿರುವ ಎಲ್ಲರೂಕೂಡ ನಾನು ಈ ದಿನ ಕೊಡುವ ನೀರಿನಿಂದ ತೃಪ್ತಿಯನ್ನು ಹೊಂದಲಿ '

ಇಂತಹ ದಯೆ, ತ್ಯಾಗ, ಸಹಿಷ್ಣುತೆಯನ್ನು ತೋರಿಸುವ ಮತ್ತೊಂದು ಜಾತಿಯನ್ನು ತೋರಿಸಲು ಸಧ್ಯವೇ ? ತಿಳಿಸಲಿ.

ವರ್ಣಾಶ್ರಮಧರ್ಮಗಳಲ್ಲಿ ಮದುವೆ ಎಂದರೆ ತಮ್ಮ ವಂಶವನ್ನು ಪವಿತ್ರವಾಗಿ ಇಟ್ಟುಕೊಳ್ಳುವುದಕ್ಕೇ ಹೊರತು, ಕೇವಲ ಕಾಮತೃಪ್ತಿಗಲ್ಲ : ಆಹಾರವನ್ನು ತೆಗೆದುಕೊಳ್ಳುವುದು ಶರೀರಧಾರಣೆಗೇ ಹೊರತು, ಜಿಹ್ವಾಚಾಪಲ್ಯ ಅಥವಾ ಹೊಟ್ಟೆತುಂಬಿಸಿಕೊಳ್ಳುವುದಕ್ಕಲ್ಲ : ಬಟ್ಟೆಯನ್ನು ಧರಿಸುವುದು ಮಾನವಿಯತೆಯನ್ನು ಕಾಪಾಡಲು, ಹಾಗೂ ಛಳಿಯಿಂದ ರಕ್ಷಿಸಿಕೊಳ್ಳುವುದಕ್ಕೇ ಹೊರತು ' ಫ್ಯಾಷನ್ ' ಗಾಗಲೀ ಅಥವಾ ತೋರಿಕೆಗಾಗಲೀ ಅಲ್ಲ. ಈ ರೀತಿ ಪ್ರತಿಯೊಂದು ವಿಷಯವೂ ಕೂಡ ನೈತಿಕತೆ ಹಾಗೂ ಒಂದು ತತ್ವವನ್ನು ಹೊಂದುತ್ತದೆ : ಈ ರೀತಿಯು ಉಚ್ಚವಾಟ್ಟದ ಜೀವನವನ್ನು ನಡೆಸುವವನೇ ಮೂದರಿಯು ಬ್ರಾಹ್ಮಣನಾಗಿರುತ್ತಾನೆ ; ಇಂಥ ಮಾಡಬಾರದ ಬ್ರಾಹ್ಮಣನನ್ನು ಉಚ್ಚವಾಟ್ಟದವನೆಂದು ತಿಳಿಯುತ್ತಾರೆ ಮತ್ತು ಅವನನ್ನು ಹೀಯಾಳಿಸಲು ಇಚ್ಛಿಸುವುದಿಲ್ಲ.

ವರ್ಣಾಶ್ರಮಧರ್ಮಗಳಲ್ಲಿರುವ ಉತ್ತಮ ರೀತಿಯು ಸಮಾಜಂಚನೆಯು ಮತ್ತಿನ್ಯಾವ ಜಾತಿಯಲ್ಲಿ ಕಾಣುವುದಿಲ್ಲ : ವರ್ಣಾಶ್ರಮಿಗಳು ಪಂಚಮರನ್ನು ಮುಟ್ಟದೇ ಇರುವುದು ಅವನನ್ನು ದೂಷಿಸುವದಕ್ಕಲ್ಲ : ಶಾಸ್ತ್ರಗಳಲ್ಲಿ ಆ ರೀತಿ ಆಜ್ಞೆಯಾಗಿರುವುದರಿಂದಲೂ, ಮತ್ತು ಅಶನಲ್ಲಿ ಧರ್ಮಬುದ್ಧಿಯನ್ನು ಹುಟ್ಟಿಸಿ ಹಿಂದಿನ ಪಾಪಕರ್ಮವನ್ನು ಕಳೆಯುವ ಸಲುವಾಗಿಯೂ ಅಸ್ಪೃಶ್ಯತೆಯನ್ನು ಆಚರಿಸುತ್ತಾರೆ ಆದರ್ಶ ರಾಜಪುತ್ರ ಶ್ರೀರಾಮಚಂದ್ರನಿಗೆ ಮಾತ್ರ ಚಂಡಾಲ ಗುಹನ ಆಶ್ರಮದಲ್ಲಿರುವುದಕ್ಕೆ ಸಾಧ್ಯ, ಮತ್ತು ಅವನಿಗೆ ಮಾತ್ರ ತನ್ನ ತಂದೆಯ ಪ್ರತಿಜ್ಞೆಗಾಗಿ, ಪಟ್ಟಾಭಿಷೇಕವಾಗಬೇಕಾಗಿದ್ದ ದಿನವಲ್ಲಿ ರಾಜ್ಯವನ್ನು ತ್ಯಜಿಸಿ ಕಾಡಿಗೆ ಹೋಗುವುದು ಸಾಧ್ಯವಾಯಿತು.

ಈ ಸನಾತನಧರ್ಮದಲ್ಲಿ ಮಾತ್ರ, ಐಶ್ವರ್ಯವಂತರಾದ, ಸುಂದರಿಯರಾದ ವಿಧವೆಯರು, ಪತಿ ತಮ್ಮ ಪತಿಯನ್ನು ನೆದೆಯುತ್ತಾ, ಇಹಲೋಕದ ಸುಖವನ್ನು ತ್ಯಜಿಸುವುದು ಸಾಧ್ಯ ; ಈ ಧರ್ಮದಲ್ಲಿ ಮಾತ್ರ ಅನೇಕ ಸಾಕರೂ ಸಾಧುಗಳೂ ಅವತಾರ ಮಾಡಿದ್ದಾರೆ ; ಈ ಸನಾತನಧರ್ಮದಲ್ಲಿ ಅದ್ವಿತೀಯ ವೀರನಾದ ಪರಶುರಾಮನು ತನ್ನ ರಾಜ್ಯವಾದ ಈ ಸಮಸ್ತ ಭೂಮಂಡಲವನ್ನೂ ಬ್ರಾಹ್ಮಣಂಗೆ ದಾನಮಾಡಿ ತಪಸ್ಸಿಗೆ ಹೋಗುವುದು ಸಾಧ್ಯವಾಯಿತು : ಈ ಧರ್ಮದಲ್ಲಿ ದಾನಶೂರನೂ, ಸತ್ಯಶೀಲನೂ ಆದ ಹರಿಶ್ಚಂದ್ರ, ಕರ್ಣ ಮುಂತಾದವರು ಇಂಥ ಸಾಧ್ಯ : ಈ ವರ್ಣಾಶ್ರಮಧರ್ಮವೇ ಪ್ರಪಂಚಕ್ಕೆ ನೂರಾರು ವೇದಗಳ ವ್ಯಾಖ್ಯಾನ ಮತ್ತು ಶಾಸ್ತ್ರಗಳ ಮೂಲಕ, ಮೊದಲಾಗಿ ಆತ್ಮನ ಅವಿನಾಶತ್ವ, ಜನನ ಪುನರ್ಜನ್ಮ, ಯೋಗ, ಆತ್ಮನಿಗೂ ಪರಮಾತ್ಮನಿಗೂ ಇರುವ ಸಂಬಂಧ, ಇವುಗಳನ್ನು ಬೋಧಿಸಿದೆ. [ಮುಂದುವರಿಯುವುದು

Truth ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಶ್ರೀ ಪ್ರೊಫೆಸರ್ ರವೀಂದ್ರಕುಮಾರ್ ಸಿದ್ಧಾಂತಶಾಸ್ತ್ರಿ M. A., P. R. S. ರವರ ' ಪ್ರಾಚೀನ ಭಾರತೀಯ ಸಂಸ್ಕೃತಿ ' ಎಂಬ ಲೇಖನದಿಂದ ಸಂಗ್ರಹಿಸಲ್ಪಟ್ಟಿದೆ.

ಆ. ಸ. ಅಯ್ಯಂಗಾರ್, ಹೊಂಗೂರು.

———

ಮೈಸೂರಿನಲ್ಲಿ, ಪಕ್ಷಾರಂಭ ಪ್ರಯುಕ್ತ ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದ

ವುಡ್‌ಲಾಂಡ್ ಜನಭರಿತ 2 ನೇ ವಾರ

ಶಿ ಸ್ಸಿ

.... ಎ. ವಿ ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂ ಜಾ ಕೆ ಪೂ ಲ್

ತಾರಾಗಣ– ಅಶೋಕಕುಮಾರ್, ಮೂಲಾ ಸಿನ್ಹಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಆಪೆರಾ— 18–9–64 ರಿಂದ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಪೋನ್ಸ್ ಮಾನ್ಸರ್

ಪಾತ್ರ– ವಂದನಾ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

SHAKTI

SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿಮಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ– ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ಸೇರಿ ನೀವು ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4